# ಕರಾವಳಿ ತರಂಗಿಣಿ

ಕಡಲ ಕಿನಾರೆಯಿಂದ ಕೆಂಪು ಕೋಟೆಯವರೆಗೆ..

ಕನ್ನಡ ವಾರಪತ್ರಿಕೆ

**ಸುಭಾಷಿತ:**

ಕ್ರೋಧದಿಂದ ಬುದ್ಧಿ ದುರ್ಬಲವಾಗುತ್ತದೆ..
ಲೋಭದಿಂದ ಸಂಸ್ಕಾರ ದೂರವಾಗುತ್ತದೆ..
ಮೋಹ ಮರ್ಯಾದೆಯನ್ನು ಕೆಡಿಸುತ್ತದೆ..
ಮದ ಜ್ಞಾನವನ್ನು ನುಂಗಿ ಹಾಕುತ್ತದೆ..
ಮಾತ್ಸರ್ಯ ಅಭಿವೃದ್ಧಿಗೆ ಮಾರಕವಾಗುತ್ತದೆ..
ಲಂಚ ಗೌರವವನ್ನು ಹಾಳು ಮಾಡುತ್ತದೆ..
ಚಿಂತೆ ಆಯುಷ್ಯವನ್ನು ಕ್ಷೀಣಿಸುತ್ತದೆ..
ಇದ್ಯಾವುದು ಇಲ್ಲದೇ ಜೀವನ ನಡೆಸಿದರೆ..
ಮಾನವನಾಗಿ ಜನಿಸಿದ್ದು ಸಾರ್ಥಕವಾಗುತ್ತದೆ..

**ಭಗವಾನ್ ಶ್ರೀಕೃಷ್ಣ**



PRGI No: KNKAN/25/A2498 www.karavalitharangini.com KARAVALI THARANGINI KANNADA Weekly Dakshina Kannada ದಿನಾಂಕ: 31-07-2026 to 06-08-2026 ಬೆಲೆ:10-00 ಸಂಪುಟ–1 ಸಂಚಿಕೆ–44 ಪುಟಗಳು–6









ದಕ್ಷಿಣ ಕನ್ನಡ ಕಾರ್ಯನಿರತ ಪತ್ರಕರ್ತರ ಸಂಘದಿಂದ ಪತ್ರಿಕಾ ಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ಅಪಘಾತ ರಹಿರ ಖಾಸಗಿ ಬಸ್ ಚಾಲಕರಿಗೆ ಗೌರವಾರ್ಪಣೆ ಮಾಡಲಾಯಿತು. ಇದೊಂದು ಮಾದರಿ ಕಾರ್ಯಕ್ರಮ ಎಂದರೆ ತಪ್ಪಾಗಲಾರದು. ಇತ್ತೀಚಿನ ದಿನಗಳಲ್ಲಿ ಮಂಗಳೂರು ನಗರದಲ್ಲಿ ಖಾಸಗಿ ಬಸ್‌ಗಳೆಂದರೆ ಜನ ಭಯ ಬೀಳುತ್ತಾರೆ. ಅದಕ್ಕೆ ಕಾರಣ ಖಾಸಗಿ ಚಾಲಕರ ಅತೀ ವೇಗದ ಚಾಲನೆ ಜೊತೆಗೆ ಅತಿಯಾದ ಹಾರನ್. ಹೆಂಗಸರು, ಹಿರಿಯ ನಾಗರಿಕರು ವಾಹನ ಚಲಾಯಿಸುವಾಗ ಖಾಸಗಿ ಬಸ್ ಬಂತೆಂದರೆ ಭಯ ಬೀಳುವಂತಾಗುತ್ತದೆ. ಇಂತಹ ಚಾಲಕರಿಗೆ ಇಂದಿನ ಸನ್ಮಾನಿತರು ಮಾದರಿಯಾಗಬೇಕು.

## ಪೆಲೆಟ್‌ಗನ್ ಪ್ರಯೋಗದ ಬಗ್ಗೆ ರಾಹುಲ್ ಗಾಂಧಿ ಪ್ರಶ್ನೆ ಮಾತ್ರ ಅಲ್ಲ :ಡಿಕೆಶಿ



**ನವದೆಹಲಿ:** ವಿದ್ಯಾರ್ಥಿಗಳ ಪ್ರತಿಭಟನೆ ವೇಳೆ ಪೊಲೀಸರ ದಾಳಿ ಹಾಗೂ ಪೆಲೆಟ್ ಗನ್ ಪ್ರಯೋಗದ ಕುರಿತು ಕೇಳಿರುವ ಪ್ರಶ್ನೆ ಕೇವಲ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರ ಪ್ರಶ್ನೆಯಷ್ಟೇ ಅಲ್ಲ, ಇಡೀ ದೇಶದ ಪ್ರಶ್ನೆಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ ಎಂದು ಮುಖ್ಯಮಂತ್ರಿ ಡಿ ಕೆ ಶಿವಕುಮಾರು ಹೇಳಿದ್ದಾರೆ. ದೆಹಲಿಯ ಕರ್ನಾಟಕ ಭವನದ ಬಳಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ದೆಹಲಿ ಪೊಲೀಸರು ಕೇಂದ್ರ ಸರ್ಕಾರದ ಅಧೀನದಲ್ಲಿ ಬರುವುದರಿಂದ ವಿದ್ಯಾರ್ಥಿಗಳ ಮೇಲೆ ಪೆಲೆಟ್‌ಗನ್ ಪ್ರಯೋಗಿಸಲು ಅನುಮತಿ ನೀಡಿದವರು ಯಾರು ಎಂಬ ಮೂಲಭೂತ ಪ್ರಶ್ನೆಗೆ ಕೇಂದ್ರ **3ನೇ ಪುಟಕ್ಕೆ**

## 82 ಕೋಟಿ ಮೌಲ್ಯದ ಮಾದಕ ವಸ್ತು ಭಸ್ಮ

**ಮಂಗಳೂರು:** ನಗರ ಪೊಲೀಸ್ ಕಮಿಷನರೇಟ್ ವತಿಯಿಂದ ವಿವಿಧ ಪ್ರಕರಣಗಳಲ್ಲಿ ವಶಪಡಿಸಿಕೊಳ್ಳಲಾಗಿದ್ದ ಅಂದಾಜು 82 ಕೋಟಿ ಮೌಲ್ಯದ ಮಾದಕ ವಸ್ತುಗಳನ್ನು ನ್ಯಾಯಾಲಯದ ಅನುಮತಿಯೊಂದಿಗೆ ವೈಜ್ಞಾನಿಕ ಹಾಗೂ ಪರಿಸರ ಸ್ನೇಹಿ ವಿಧಾನದಲ್ಲಿ ನಾಶಪಡಿಸಲಾಗಿದೆ. ಜುಲೈ 29ರಂದು ಮುಲ್ಕಿಯ ಕೊಲ್ನಾಡು ಇಂಡಸ್ಟ್ರಿಯಲ್ ಪ್ರದೇಶದಲ್ಲಿರುವ ರಾಮ್ಕಿ ಎನರ್ಜಿ ಅಂಡ್ ಎನ್ವರಾನ್‌ಮೆಂಟ್ ಲಿಮಿಟೆಡ್ ಸಂಸ್ಥೆಯಲ್ಲಿ 'ಡ್ರಗ್ ಡಿಸ್ಪೋಸಲ್ ಕಮಿಟಿ' ಸಮಕ್ಷಮ ಈ ವಿಲೇವಾರಿ ಪ್ರಕ್ರಿಯೆ ನೆರವೇರಿತು. ನಗರದ 16 ಪೊಲೀಸ್ ಠಾಣೆಗಳ ವ್ಯಾಪ್ತಿಯ 59 ಎನ್.ಡಿ.ಪಿ.ಎಸ್. ಪ್ರಕರಣಗಳಿಗೆ **3ನೇ ಪುಟಕ್ಕೆ**



## ಪ್ರಾಣ ರಕ್ಷಣೆಗೆ 'ರಾಹ್–ವೀರ್', 'ಪಿಎಂ–ರಾಹತ್' ಆಸರೆ

**ಮಂಗಳೂರು:** ಭಾರತದಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ರಸ್ತೆ ಅಪಘಾತಗಳು ಮತ್ತು ಇದರಿಂದ ಸಂಭವಿಸುತ್ತಿರುವ ಸಾವು–ನೋವುಗಳನ್ನು ತಡೆಯಲು ಹಾಗೂ ಅಪಘಾತಕ್ಕೀಡಾದವರಿಗೆ ತಕ್ಷಣದ ವೈದ್ಯಕೀಯ ನೆರವು ಖಚಿತಪಡಿಸಲು ಕೇಂದ್ರ ಸರ್ಕಾರವು ಮಹತ್ವದ ಹೆಜ್ಜೆ ಇಟ್ಟಿದೆ. ಅಪಘಾತದ ನಂತರದ ನಿರ್ಣಾಯಕ ಸಮಯದಲ್ಲಿ ಹಣದ ಮುಗ್ಗಟ್ಟು ಅಥವಾ ಆಸ್ಪತ್ರೆಯ ಮುಂಗಡ ಹಣದ ಸಮಸ್ಯೆಯಿಂದಾಗಿ ಯಾರು ಜೀವ ಕಳೆದುಕೊಳ್ಳಬಾರದು ಎಂಬ ಮಹಾದುದ್ದೇಶದಿಂದ 'ಪಿಎಂ–ರಾಹತ್' **3ನೇ ಪುಟಕ್ಕೆ**









# ಸುದ್ದಿ ತುಣುಕು

ಪ್ರತಿಪಕ್ಷ ನಾಯಕ ಆರ್. ಅಶೋಕ್ ನೇತೃತ್ವದ ಬಿಜೆಪಿ ತಂಡ ದಾವಣಗೆರೆ ಜಿಲ್ಲೆಯಲ್ಲಿ ಬರ ಅಧ್ಯಯನ ನಡೆಸಿ, ಈ ವೇಳೆ ಬರಗಾಲ ಎಂದು ಘೋಷಿಸಲು ಒತ್ತಾಯಿಸಲಾಯಿತು.

ಕಲ್ಯಾಣ ಕರ್ನಾಟಕ ವೃಂದದ ಸಿವಿಲ್ ಪೊಲೀಸ್ ಕಾನ್ಸ್ಟೇಬಲ್ ಹುದ್ದೆಗಳ ಭರ್ತಿಗೆ ಆಗಸ್ಟ್ 2ರಂದು ನಡೆಯುವ ಲಿಖಿತ ಪರೀಕ್ಷೆಯ ಸಮಯವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (KEA) ಬದಲಾವಣೆ ಮಾಡಿದೆ.

ಕಾವೇರಿ ನೀರು ನಿಯಂತ್ರಣ ಸಮಿತಿ ಆದೇಶ ಪಾಲನೆ ಮಾಡುವುದು ಕಷ್ಟವಾಗಿದೆ. ಈ ನಿಟ್ಟಿನಲ್ಲಿ ಮೇಲ್ಮನವಿ ಅರ್ಜಿ ಸಲ್ಲಿಸಲಾಗುವುದು ಎಂದು ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.

ಬಳ್ಳಾರಿಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (APMC)ಯಲ್ಲಿ ಅಕ್ರಮ ಬೆಳಕಿಗೆ ಬಂದಿದೆ. ಇಲ್ಲಿ ವ್ಯಾಪಕ ನಿಯಮ ಉಲ್ಲಂಘನೆ, ನಿವೇಶನ ಹಾಗೂ ಮಳಿಗೆಗಳ ಅಕ್ರಮ ಹಸ್ತಾಂತರ ಮತ್ತು ರಾಜಸ್ವಕ್ಕೆ ಕೋಟ್ಯಂತರ ರೂಪಾಯಿ ಕನ್ನ ಹಾಕಿರುವುದು ಬಳ್ಳಾರಿ ಉಪ ವಿಭಾಗಾಧಿಕಾರಿ (AC) ರಾಜೇಶ್ ಹೆಚ್.ಡಿ ನೇತೃತ್ವದ ತನಿಖಾ ತಂಡದ ವರದಿಯಿಂದ ಬಯಲಾಗಿದೆ.

ಮಂಗಳೂರು ನಗರ ಪೊಲೀಸ್ ಕಮಿಷನರೇಟ್ ವತಿಯಿಂದ ಜಪ್ತಿ ಮಾಡಲಾಗಿದ್ದ ಸುಮಾರು 82 ಕೋಟಿ ರೂ. ಮೌಲ್ಯದ ಮಾದಕ ವಸ್ತುಗಳನ್ನು ನ್ಯಾಯಾಲಯದ ಅನುಮತಿಯೊಂದಿಗೆ ನಾಶಪಡಿಸಲಾಗಿದೆ.

ಮುಂದಿನ ಪೀಳಿಗೆಗೆ ಹುಲಿಗಳ ಮಹತ್ವ ತಿಳಿಸಿಕೊಡುವ ಉದ್ದೇಶದಿಂದ ಆರ್ಟ್ ಕಲ್ಚರಲ್ ಎಜುಕೇಶನಲ್ ಎನ್‌ಲೈಟ್ (ACE) ಫೌಂಡೇಷನ್ ವತಿಯಿಂದ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಅರ್ಥಪೂರ್ಣ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಗುರುಪೂರ್ಣಿಮೆ ಅಂಗವಾಗಿ ಬಳ್ಳಾರಿಯ ವಿವಿಧ ದೇವಾಲಯಗಳಲ್ಲಿ ಗುರು ವಂದನೆ, ವಿಶೇಷ ಪೂಜೆ ಹಾಗೂ ಧಾರ್ಮಿಕ ಕಾರ್ಯಕ್ರಮಗಳು ಶ್ರದ್ಧಾಭಕ್ತಿಯಿಂದ ನಡೆದವು.

ತಮಿಳುನಾಡಿಗೆ ಕಾವೇರಿ ನೀರನ್ನು ಬಿಡುವಂತೆ ನೀಡಿರುವ ಆದೇಶದ ಹಿನ್ನೆಲೆಯಲ್ಲಿ ಮೈಸೂರಿನ ಹಲವು ಕಡೆ ರೈತ ಸಂಘಟನೆಗಳು ಪ್ರತಿಭಟನೆ ನಡೆಸಿ ನೀರು ಬಿಡದಂತೆ ಸರ್ಕಾರವನ್ನು ಆಗ್ರಹಿಸಿವೆ.

ಕರ್ನಾಟಕ ನೀರಾವರಿ ನಿಗಮಕ್ಕೆ ಐಎಎಸ್ ಅಧಿಕಾರಿಯನ್ನು ನೇಮಿಸುವಂತೆ ರೈತ ಸೇನಾ ಕರ್ನಾಟಕ ರಾಜ್ಯಾಧ್ಯಕ್ಷ ವೀರೇಶ ಸೊಬರದ ಮಠ ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

ಕೆಪಿಎಸ್‌ಸಿ ಪಶುವೈದ್ಯಾಧಿಕಾರಿ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಹಗರಣವನ್ನು ಸಿಬಿಐ ತನಿಖೆಗೆ ವಹಿಸುವಂತೆ ಆಗ್ರಹಿಸಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ.

ಅಕ್ರಮವಾಗಿ ಕಸಾಯಿಖಾನೆಗೆ ಸಾಗಿಸುತ್ತಿದ್ದ 60ಕ್ಕೂ ಹೆಚ್ಚು ಜಾನುವಾರುಗಳನ್ನು ಮೈಸೂರು ಜಿಲ್ಲೆಯ ಕವಲಂದೆ ಪೊಲೀಸರು ರಕ್ಷಿಸಿದ್ದು, ಓರ್ವ ವ್ಯಕ್ತಿಯನ್ನು ಬಂಧಿಸಿದ್ದಾರೆ.

ಪ್ರತಿಭಟನೆ ವೇಳೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ ಆರೋಪದ ಮೇಲೆ ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಕುಮಟಾದಲ್ಲಿ ಸಾರ್ವಜನಿಕ ಸ್ಥಳದಲ್ಲಿ ಗಾಂಜಾ ಸೇವನೆ ಮಾಡುತ್ತಿದ್ದ ಆರೋಪದ ಮೇಲೆ ಪಶ್ಚಿಮ ಬಂಗಾಳದ ಆರು ಮಂದಿ ಸೆಂಟ್ರಿಂಗ್ ಕಾರ್ಮಿಕರನ್ನು ಕುಮಟಾ ಪೊಲೀಸರು ವಶಕ್ಕೆ ಪಡೆದು, ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿದ್ದಾರೆ.

ಪ್ರಮುಖ ನಕ್ಸಲ್ ನಾಯಕನಾಗಿದ್ದ, 1 ಕೋಟಿಗೂ ಅಧಿಕ ಇನಾಮು ಹೊಂದಿದ್ದ ಮಿಸಿರ್ ಬೆಸ್ರಾನನ್ನು ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ನೈಸ್ ರಸ್ತೆಗಾಗಿ ಭೂಸ್ವಾಧೀನಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ನೂರಾರು ರೈತರಿಗೆ ಕರ್ನಾಟಕ ಹೈಕೋರ್ಟ್ ಬಿಗ್ ರಿಲೀಫ್ ನೀಡಿದೆ.

ಕಲ್ಲಿದ್ದಲು ನಿಕ್ಷೇಪ ಹಂಚಿಕೆ ಕೇಸ್ – ಮಾಜಿ ಪಿಎಂ ದಿವಂಗತ ಮನಮೋಹನ್ ಸಿಂಗ್ ಅವರಿಗೆ ಸಿಬಿಐ ಕ್ಲೀನ್‌ಚಿಟ್ – ಪ್ರಕರಣವನ್ನು ಮುಕ್ತಾಯಗೊಳಿಸಿದ ಸುಪ್ರೀಂ ಕೋರ್ಟ್.

# ಬಾದುಷ



**ಬೇಕಾಗುವ ಪದಾರ್ಥಗಳು :**
3 ಕಪ್ ಮೈದಾ ಹಿಟ್ಟು, 5 ಚಮಚ ತುಪ್ಪ, 1ಕಪ್ ಸಕ್ಕರೆ, ಚಿಟಿಕೆ ಏಲಕ್ಕಿ ಪುಡಿ, ಉಪ್ಪು ರುಚಿಗೆ ತಕ್ಕಷ್ಟು, ಕರಿಯಲು ಎಣ್ಣೆ.

**ಮಾಡುವ ವಿಧಾನ :**
ಒಂದು ಪಾತ್ರೆಯಲ್ಲಿ ಮೈದಾ ಹಿಟ್ಟು, ಉಪ್ಪು ಮತ್ತು ತುಪ್ಪ ಹಾಕಿ ಕಲಸಿ. ಸ್ವಲ್ಪ ಸ್ವಲ್ಪವೇ ನೀರು ಹಾಕುತ್ತಾ ಮೃದುವಾದ ಚಪಾತಿ ಹಿಟ್ಟಿನ ಹದಕ್ಕೆ ಕಲಸಬೇಕು ಹಾಗೆ ನಿಂಬೆ ಹಣ್ಣಿನ ಗಾತ್ರದ ಉಂಡೆ ಮಾಡಿ ಸ್ವಲ್ಪ ಚಪ್ಪಟೆಯಾಕಾರ ಮಾಡಿ ಇಟ್ಟುಕೊಳ್ಳಬೇಕು. ಈಗ 1 ಕಪ್ ಸಕ್ಕರೆಗೆ 1/2 ಕಪ್ ನೀರು ಹಾಕಿ, ಏಲಕ್ಕಿ ಪುಡಿ ಸೇರಿಸಿ ಒಂದೆಳೆ ಪಾಕ ಮಾಡಿಕೊಳ್ಳಬೇಕು. ಒಂದು ಬಾಣಲೆಯಲ್ಲಿ ಎಣ್ಣೆ ಬಿಸಿ ಮಾಡಿ. ನಂತರ ಚಪ್ಪಟೆಯಾಕಾರದ ಉಂಡೆಯನ್ನು ಬಿಸಿಯಾದ ಎಣ್ಣೆಯಲ್ಲಿ ಹಾಕಿ ಮಧ್ಯಮ ಉರಿಯಲ್ಲಿ ಕಾಯಿಸಿ. ಬಿಸಿಯಾದ ಸಕ್ಕರೆ ಪಾಕದಲ್ಲಿ ಅದ್ದಿ ತೆಗೆದರೆ ರುಚಿಯಾದ ಬಾದುಷ ಸವಿಯಲು ಸಿದ್ಧ.

# ಪ್ರತೀಕಾರದ ಕಾರ್ಯಾಚರಣೆ ನಿಲ್ಲಿಸಿದ ಇರಾನ್



ಟೆಹರಾನ್: ಅಮೆರಿಕ ತನ್ನ ಮೇಲಿನ ದಾಳಿಗಳನ್ನು ಸ್ಥಗಿತಗೊಳಿಸಿರುವ ಹಿನ್ನೆಲೆಯಲ್ಲಿ, ಪಶ್ಚಿಮ ಏಷ್ಯಾದಲ್ಲಿರುವ ಅಮೆರಿಕದ ಮಿತ್ರರಾಷ್ಟ್ರಗಳ ವಿರುದ್ಧ ನಡೆಸುತ್ತಿದ್ದ ಪ್ರತೀಕಾರದ ದಾಳಿಯನ್ನು ನಿಲ್ಲಿಸಿರುವುದಾಗಿ ಇರಾನ್ ಭಾನುವಾರ ತಿಳಿಸಿದೆ. "ನಮ್ಮ ಕಾರ್ಯತಂತ್ರವು ಮೂಲಭೂತವಾಗಿ ಪ್ರತೀಕಾರದ್ದಾಗಿತ್ತು. ಹೀಗಾಗಿ ಪ್ರತೀಕಾರದ ಕಾರ್ಯಾಚರಣೆಗಳನ್ನು ಪ್ರಸ್ತುತ ನಿಲ್ಲಿಸಿದ್ದೇವೆ" ಎಂದು ಇರಾನ್ ಸೇನಾ ವಕ್ತಾರ ಮೊಹಮ್ಮದ್ ಅಕ್ರಮಿನಿಯಾ ಸ್ಪಷ್ಟಪಡಿಸಿದ್ದಾರೆ.

# 'ನ್ಯೂಯಾರ್ಕ್‌ಗೆ ಬಂದೇ ಬರುತ್ತೇನೆ': ನೆತನ್ಯಾಹು



ನ್ಯೂಯಾರ್ಕ್ : ನ್ಯೂಯಾರ್ಕ್ ನಗರದ ಮೇಯರ್ ಜೊಹ್ರಾನ್ ಮಮ್ದಾನಿ ಅವರ ತೀವ್ರ ವಿರೋಧ ಹಾಗೂ ಎಚ್ಚರಿಕೆಯ ನಡುವೆಯೂ, ಮುಂಬರುವ ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯನ್ನು ಉದ್ದೇಶಿಸಿ ಮಾತನಾಡಲು ತಾವು ನ್ಯೂಯಾರ್ಕ್‌ಗೆ ಆಗಮಿಸುವುದಾಗಿ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಸ್ಪಷ್ಟಪಡಿಸಿದ್ದಾರೆ. ಒಂದು ವೇಳೆ ನೆತನ್ಯಾಹು ನ್ಯೂಯಾರ್ಕ್‌ಗೆ ಭೇಟಿ ನೀಡಿದರೆ ಅವರನ್ನು ಬಂಧಿಸಲು ನಗರಾಡಳಿತಕ್ಕೆ ಕಾನೂನಾತ್ಮಕ ಅಧಿಕಾರವಿಲ್ಲದಿದ್ದರೂ, ನಗರದ ಪರವಾಗಿ ಅವರನ್ನು ಸ್ವಾಗತಿಸುವುದಿಲ್ಲ ಎಂದು ಮಮ್ದಾನಿ ತಿಳಿಸಿದ್ದರು.

# ಮಾಲಿಯಲ್ಲಿ ಭಾರತೀಯ ಉದ್ಯಮಿ ಬಿಡುಗಡೆ



ಮಾಲಿ : ಪಶ್ಚಿಮ ಆಫ್ರಿಕಾದ ಮಾಲಿಯಲ್ಲಿ ಅಪಹರಣಕ್ಕೊಳಗಾಗಿದ್ದ ಭಾರತೀಯ ಮೂಲದ 75 ವರ್ಷದ ಪ್ರಮುಖ ವಜ್ರೋದ್ಯಮಿ ಧೀರೂ ರಮಣಿ ಕೊನೆಗೂ ಸಶಸ್ತ್ರ ಅಪಹರಣಕಾರರ ಬಂಧನದಿಂದ ಬಿಡುಗಡೆಯಾಗಿದ್ದಾರೆ. ಉದ್ಯಮಿಯನ್ನು ಸುರಕ್ಷಿತವಾಗಿ ಬಿಡಿಸಿಕೊಳ್ಳಲು ಅವರ ಕುಟುಂಬಸ್ಥರು ಅಪಹರಣಕಾರರಿಗೆ ಬರೋಬ್ಬರಿ 4 ಮಿಲಿಯನ್ ಯುರೋ (ಸುಮಾರು 44 ಕೋಟಿ ರೂಪಾಯಿ) ನೀಡಿದ್ದಾರೆ ಎಂದು ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ (ಪಿಟಿಐ) ವರದಿ ಮಾಡಿದೆ. ಈ ಆಘಾತಕಾರಿ ಘಟನೆಯಿಂದ ಇಡೀ ವಜ್ರೋದ್ಯಮ ಕ್ಷೇತ್ರವೇ ತಲ್ಲಣಗೊಂಡಿದೆ.

# ಯುನೆಸ್ಕೋ ಪಟ್ಟಿಗೆ 4 ನೂತನ ತಾಣಗಳು



ದಕ್ಷಿಣ ಕೊರಿಯ : ದಕ್ಷಿಣ ಕೊರಿಯಾದ ಬುಸಾನ್‌ನಲ್ಲಿ ನಡೆಯುತ್ತಿರುವ ವಿಶ್ವ ಪಾರಂಪರಿಕ ಸಮಿತಿಯ 48ನೇ ಅಧಿವೇಶನದಲ್ಲಿ ಜಾಗತಿಕವಾಗಿ ಅತ್ಯಂತ ಮಹತ್ವದ ನಾಲ್ಕು ಪ್ರಸಿದ್ಧ ತಾಣಗಳನ್ನು 'ಯುನೆಸ್ಕೋ ವಿಶ್ವ ಪಾರಂಪರಿಕ ಪಟ್ಟಿ'ಗೆ ಅಧಿಕೃತವಾಗಿ ಸೇರಿಸಲಾಗಿದೆ. ಅಸಾಧಾರಣ ಸಾಂಸ್ಕೃತಿಕ, ಐತಿಹಾಸಿಕ ಹಾಗೂ ನೈಸರ್ಗಿಕ ಮೌಲ್ಯಗಳನ್ನು ಹೊಂದಿರುವ ಈ ಸ್ಥಳಗಳನ್ನು ಭವಿಷ್ಯದ ಪೀಳಿಗೆಗಾಗಿ ಸುದೀರ್ಘ ಕಾಲ ಸಂರಕ್ಷಿಸುವ ಉದ್ದೇಶದಿಂದ ಈ ವಿಶೇಷ ಮಾನ್ಯತೆ ನೀಡಲಾಗಿದೆ.

# ಚೀನಾಗೆ ಅಪ್ಪಳಿಸಿದ 'ನೌಲ್' ಚಂಡಮಾರುತ



ಬೀಜಿಂಗ್ : ದಕ್ಷಿಣ ಚೀನಾ ಹಾಗೂ ಹಾಂಕಾಂಗ್ ಪ್ರದೇಶಕ್ಕೆ 'ನೌಲ್' ಚಂಡಮಾರುತ ಭಾನುವಾರ ಮುಂಜಾನೆ ಅಪ್ಪಳಿಸಿದ್ದು, ಭಾರಿ ಗಾಳಿ ಸಹಿತ ಧಾರಾಕಾರ ಮಳೆಯಾಗುತ್ತಿದೆ. ಚೀನಾದ ರಾಷ್ಟ್ರೀಯ ಹವಾಮಾನ ಕೇಂದ್ರದ ಮಾಹಿತಿಯಂತೆ, ದಕ್ಷಿಣ ಗುವಾಂಗ್‌ಡಾಂಗ್ ಪ್ರಾಂತ್ಯದ ಹುಯಿಝೌ ನಗರದ ಹುಯಿಡಾಂಗ್ ಕೌಂಟಿ ಕರಾವಳಿಯಗೆ ಚಂಡಮಾರುತವು ಅಪ್ಪಳಿಸಿದೆ. ಪ್ರಸ್ತುತ ಚಂಡಮಾರುತವು ಗಂಟೆಗೆ ಗರಿಷ್ಠ 145 ಕಿಲೋಮೀಟರ್ ಬಲವಾದ ಗಾಳಿಯೊಂದಿಗೆ ಒಳನಾಡಿನ ಗುವಾಂಗ್‌ಡಾಂಗ್ ಕಡೆಗೆ ಚಲಿಸುತ್ತಿದೆ.

# ಪಾಕ್ ಮಣಿಸಿ ಚಿನ್ನ ಗೆದ್ದ ಭಾರತ



ಮಸ್ಕತ್ : ಇಲ್ಲಿ ನಡೆದ ಎಫ್‌ಐಹೆಚ್ ಯುವ ಹಾಕಿ5ಎಸ್ ಏಷ್ಯನ್ ಚಾಂಪಿಯನ್‌ಶಿಪ್‌ನ ಸಬ್–ಜೂನಿಯರ್ ಪುರುಷರ ವಿಭಾಗದ ಫೈನಲ್ ಪಂದ್ಯದಲ್ಲಿ ಭಾರತ ತಂಡವು ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನವನ್ನು 3–1 ಗೋಲುಗಳಿಂದ ಸೋಲಿಸಿ ಚಿನ್ನದ ಪದಕದೊಂದಿಗೆ ಏಷ್ಯನ್ ಚಾಂಪಿಯನ್ ಆಗಿ ಹೊರಹೊಮ್ಮಿದೆ. ಈ ಐತಿಹಾಸಿಕ ಗೆಲುವಿನೊಂದಿಗೆ ಭಾರತೀಯ ಪುರುಷರ ತಂಡವು ಎಲೈಟ್ ಪೂಲ್ ಕೋಷ್ಟಕದಲ್ಲಿ ಅಗ್ರಸ್ಥಾನದಲ್ಲಿದ್ದು, ಅಜೇಯವಾಗಿ ತನ್ನ ಅಭಿಯಾನವನ್ನು ಪೂರ್ಣಗೊಳಿಸಿದೆ.

# ಇಶಾ ಸಿಂಗ್‌ಗೆ ಚಿನ್ನ, ಮನು ಭಾಕರ್‌ಗೆ ಕಂಚು



ಹ್ಯಾಂಗ್‌ಝೌ : ಚೀನಾದ ಹ್ಯಾಂಗ್‌ಝೌನಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ (ISSF) ವಿಶ್ವಕಪ್ ಶೂಟಿಂಗ್ ಟೂರ್ನಿಯ ಮಹಿಳೆಯರ 25 ಮೀಟರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಭಾರತದ ಇಶಾ ಸಿಂಗ್ ಚಿನ್ನದ ಪದಕ ಗೆದ್ದು ಐತಿಹಾಸಿಕ ಸಾಧನೆ ಮಾಡಿದ್ದಾರೆ. ಇದೇ ಸ್ಪರ್ಧೆಯಲ್ಲಿ ಭಾರತದ ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಮನುಭಾಕರ್ ಕಂಚಿನ ಪದಕಕ್ಕೆ ತೃಪ್ತಿಪಟ್ಟುಕೊಂಡಿದ್ದಾರೆ. ಫೈನಲ್‌ನಲ್ಲಿ ಸ್ಪರ್ಧೆಯುದ್ದಕ್ಕೂ ಅತ್ಯುತ್ತಮ ನಿಯಂತ್ರಣ ಸಾಧಿಸಿದ ಇಶಾ ಸಿಂಗ್, ಒಟ್ಟು 40 ಅಂಕಗಳನ್ನು ಗಳಿಸಿ ಅಗ್ರಸ್ಥಾನ ಪಡೆದುಕೊಂಡರು.

# ವಲ್ಲೂರಿ ಅಜಯ್ ಬಾಬುಗೆ ಬೆಳ್ಳಿ ಪದಕ



ಗ್ಲ್ಯಾಸ್ಗೋ : ಕಾಮನ್‌ವೆಲ್ತ್ ಗೇಮ್ಸ್‌ನ ಪುರುಷರ 79 ಕೆಜಿ ವಿಭಾಗದ ವೇಟ್‌ಲಿಫ್ಟಿಂಗ್ ಸ್ಪರ್ಧೆಯಲ್ಲಿ ಭಾರತದ ಉದಯೋನ್ಮುಖ ಕ್ರೀಡಾಪಟು, ಆಂಧ್ರಪ್ರದೇಶದ 21 ವರ್ಷದ ವಲ್ಲೂರಿ ಅಜಯ್ ಬಾಬು ಅವರು ಬೆಳ್ಳಿ ಪದಕಕ್ಕೆ ಕೊರಳೊಡ್ಡಿದ್ದಾರೆ. ಪ್ರಸ್ತುತ ವೇಟ್‌ಲಿಫ್ಟಿಂಗ್‌ನಲ್ಲಿ ಭಾರತಕ್ಕೆ ಲಭಿಸಿದ ಆರನೇ ಪದಕ ಇದಾಗಿದೆ. ರೋಚಕ ಸ್ಪರ್ಧೆಯಲ್ಲಿ ಅಜಯ್ ಅವರು ಸ್ನ್ಯಾಚ್‌ನಲ್ಲಿ 149 ಕೆ.ಜಿ ಹಾಗೂ ಕ್ಲೀನ್ ಅಂಡ್ ಜರ್ಕ್‌ನಲ್ಲಿ 181 ಕೆ.ಜಿ ಸೇರಿದಂತೆ ಒಟ್ಟು 330 ಕೆ.ಜಿ ಭಾರ ಎತ್ತುವ ಮೂಲಕ ಕೂಟ ದಾಖಲೆಯೊಂದಿಗೆ 2ನೇ ಸ್ಥಾನ ಪಡೆದುಕೊಂಡರು.

# ಯಶ್ಪಾಲ್ ಸುವರ್ಣ ವಿರುದ್ಧ ಕಠಿಣ ಕಾನೂನು ಕ್ರಮ– ಭಂಡಾರಿ



ಮಂಗಳೂರು: ಉಡುಪಿ ಶಾಸಕ ಯಶ್ಪಾಲ್ ಸುವರ್ಣ ಅವರು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಅವರ ವಿರುದ್ಧ ನೀಡಿರುವ ದ್ವೇಷಪೂರಿತ, ಅವಹೇಳನಕಾರಿ ಹಾಗೂ ಪ್ರಚೋದನಕಾರಿ ಹೇಳಿಕೆಗಳನ್ನು ರಾಜ್ಯ ಸರ್ಕಾರ ಅತ್ಯಂತ ಗಂಭೀರವಾಗಿ ಪರಿಗಣಿಸಿದೆ. ಪ್ರಕರಣದ ಎಲ್ಲ ಅಂಶಗಳನ್ನು ಪರಿಶೀಲಿಸಿ ಕಾನೂನಿನ ಅನ್ವಯ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷರು ಹಾಗೂ ವಿಧಾನ ಪರಿಷತ್ ಶಾಸಕರಾದ ಮಂಜುನಾಥ ಭಂಡಾರಿ ತಿಳಿಸಿದ್ದಾರೆ. "ರಾಹುಲ್ ಗಾಂಧಿ ವಂಶವನ್ನು ಧ್ವಂಸ ಮಾಡುತ್ತೇವೆ" ಎಂದು ಬಹಿರಂಗವಾಗಿ ಹೇಳಿಕೆ ನೀಡಿರುವುದು ಖಂಡನೀಯ ಎಂದರು.

# 2028ರ ಚುನಾವಣೆಗೆ ಸ್ಪರ್ಧಿಸಲ್ಲ : ಸಿದ್ದರಾಮಯ್ಯ



ಮಂಡ್ಯ : ರಾಜ್ಯ ರಾಜಕೀಯದಲ್ಲಿ ಭಾರೀ ಸಂಚಲನ ಮೂಡಿಸುವಂತಹ ಮಹತ್ವದ ಬೆಳವಣಿಗೆಯೊಂದು ನಡೆದಿದ್ದು, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2028ರ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ತಾವಿನ್ನು ಸ್ಪರ್ಧಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಮಂಡ್ಯದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ತಮ್ಮ ಮುಂದಿನ ರಾಜಕೀಯ ನಡೆ ಮತ್ತು ಭವಿಷ್ಯದ ಕುರಿತು ಮೊದಲ ಬಾರಿಗೆ ನೇರ ಹಾಗೂ ಸ್ಪಷ್ಟ ಸಂದೇಶ ನೀಡಿದ್ದಾರೆ. ಈ ಹೇಳಿಕೆಯು ಆಡಳಿತಾರೂಢ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು, ಹೈಕಮಾಂಡ್ ಹಾಗೂ ಇಡೀ ರಾಜ್ಯ ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

# ಕಾನೂನುಬದ್ಧವಾಗಿಯೇ ಎಫ್‌ಐಆರ್: ಪ್ರಿಯಾಂಕ್ ಖರ್ಗೆ



ಬೆಂಗಳೂರು : ಬಿಜೆಪಿ ನಾಯಕ ಸಿ.ಟಿ. ರವಿ ವಿರುದ್ಧ ದಾಖಲಾಗಿರುವ ಎಫ್‌ಐಆರ್ ಕುರಿತು ಸಚಿವ ಪ್ರಿಯಾಂಕ್ ಖರ್ಗೆ ಪ್ರತಿಕ್ರಿಯಿಸಿದ್ದು, ಪ್ರಕರಣವನ್ನು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ (ಬಿಎನ್‌ಎಸ್‌ಎಸ್) ನಿಯಮಗಳ ಅನ್ವಯವೇ ದಾಖಲಿಸಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, "ಇದರಲ್ಲಿ ಕಾನೂನುಬಾಹಿರವಾಗಿ ಏನೂ ನಡೆದಿಲ್ಲ. ನಾವು ಯಾವುದೇ ಎಫ್.ಐ.ಆರ್ ದಾಖಲಿಸುವಾಗ ಬಿ.ಎನ್.ಎಸ್.ಎಸ್ (BNSS) ಕಾಯ್ದೆಯ ನಿಯಮಗಳಡಿಯಲ್ಲೇ ಕ್ರಮ ಕೈಗೊಳ್ಳಬೇಕಾಗುತ್ತದೆ. ಅದರಂತೆಯೇ ಈ ಪ್ರಕರಣದಲ್ಲೂ ಕ್ರಮ ವಹಿಸಲಾಗಿದೆ" ಎಂದು ಹೇಳಿದರು.

# ದೆಹಲಿಯಲ್ಲಿ ಅಧಿಕಾರಿಗಳ ಜೊತೆ ಸಿಎಂ ಡಿ.ಕೆ.ಶಿ ಮಹತ್ವದ ಸಭೆ




ನವದೆಹಲಿ: ಮೇಕೆದಾಟು ಮತ್ತು ಮಹದಾಯಿ ಯೋಜನೆಗಳು ಸೇರಿದಂತೆ ರಾಜ್ಯದ ಕುಡಿಯುವ ನೀರು ಹಾಗೂ ಜಲ ಸಂಪನ್ಮೂಲ ಯೋಜನೆಗಳ ಪ್ರಸ್ತುತ ಸ್ಥಿತಿಗತಿ ಮತ್ತು ರಾಜ್ಯದ ಜಲಾಶಯಗಳಲ್ಲಿನ ನೀರಿನ ಪರಿಸ್ಥಿತಿಯ ಕುರಿತು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ದೆಹಲಿಯ ಕರ್ನಾಟಕ ಭವನದಲ್ಲಿ ಕಾನೂನು ಮತ್ತು ಜಲ ಸಂಪನ್ಮೂಲ ಇಲಾಖೆಗಳ ಹಿರಿಯ ಅಧಿಕಾರಿಗಳೊಂದಿಗೆ ಉನ್ನತ ಮಟ್ಟದ ಸಮಾಲೋಚನೆ ನಡೆಸಿದರು. ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ, ಮುಖ್ಯಮಂತ್ರಿಯವರ ಕಾರ್ಯದರ್ಶಿ ನಕುಲ್ ಹಾಗೂ ತಾಂತ್ರಿಕ ಸಲಹೆಗಾರ ಜೈಪ್ರಕಾಶ್ ಸೇರಿದಂತೆ ಮುಂತಾದ ಪ್ರಮುಖರು ಉಪಸ್ಥಿತರಿದ್ದರು.

# ದಯಾಮರಣ ಕೊರಿ ಗೃಹ ಸಚಿವರಿಗೆ ಪೊಲೀಸರ ಅನಾಮಧೇಯ ಪತ್ರ



ಬೆಂಗಳೂರು : ರಾಜ್ಯ ಪೊಲೀಸ್ ಇಲಾಖೆಯಲ್ಲಿ ಅಂತರ್ ಜಿಲ್ಲಾ ವರ್ಗಾವಣೆ ಪ್ರಕ್ರಿಯೆ ನನೆಗುದಿಗೆ ಬಿದ್ದಿರುವ ಹಿನ್ನೆಲೆಯಲ್ಲಿ, ಪೊಲೀಸ್ ಕಾನ್ಸ್ಟೇಬಲ್‌ಗಳು ಗೃಹ ಸಚಿವರಿಗೆ ಬರೆದಿರುವ ಅನಾಮಧೇಯ ಪತ್ರವೊಂದು ಈಗ ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ಸಂಚಲನ ಮೂಡಿಸಿದೆ. 'ತಮಗೆ ತಕ್ಷಣವೇ ವರ್ಗಾವಣೆ ನೀಡಿ, ಇಲ್ಲವಾದರೆ ಸಿಬ್ಬಂದಿ ಹಾಗೂ ಅವರ ಕುಟುಂಬಸ್ಥರಿಗೆ ದಯಾಮರಣಕ್ಕೆ ಅವಕಾಶ ಕೊಡಿ' ಎಂದು ಪತ್ರದ ಮೂಲಕ ಅಳಲು ತೋಡಿಕೊಳ್ಳಲಾಗಿದೆ. ಪತ್ರದಲ್ಲಿ ಪ್ರಮುಖವಾಗಿ ಬೆಂಗಳೂರು ನಗರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 2016ರ ಬ್ಯಾಚ್‌ನ ಕಾನ್ಸ್ಟೇಬಲ್‌ಗಳಿಗೆ ತೀವ್ರ ಅನ್ಯಾಯವಾಗುತ್ತಿದೆ ಎಂದು ದೂರಲಾಗಿದೆ.

# ಫಸಲ್ ಬಿಮಾ ಯೋಜನೆ: ಬ್ಯಾಂಕ್, ಏಜೆನ್ಸಿಗಳ ನಿರಾಸಕ್ತಿ




ಬೆಂಗಳೂರು : ರಾಜ್ಯದಲ್ಲಿ ಮುಂಗಾರು ಮಳೆಯ ಅಭಾವದಿಂದ ಬೆಳೆ ನಷ್ಟದ ಭೀತಿ ಎದುರಿಸುತ್ತಿರುವ ರೈತರಿಗೆ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಆಸರೆಯಾಗಬೇಕಿತ್ತು. ಆದರೆ, ಯೋಜನೆಯ ಅನುಷ್ಠಾನದಲ್ಲಿ ಬ್ಯಾಂಕ್‌ಗಳು ಮತ್ತು ಸರ್ಕಾರದ ವಿವಿಧ ಸೇವಾ ಏಜೆನ್ಸಿಗಳು ತೀವ್ರ ನಿರಾಸಕ್ತಿ ತೋರುತ್ತಿರುವುದು ರೈತರನ್ನು ತೀವ್ರ ಸಂಕಷ್ಟಕ್ಕೆ ತಳ್ಳಿದೆ. ರಾಜ್ಯದ 26 ಜಿಲ್ಲೆಗಳಲ್ಲಿ ಮಳೆ ಕೊರತೆ ಉಂಟಾಗಿದ್ದು, ಕೇವಲ 5 ಜಿಲ್ಲೆಗಳಲ್ಲಿ ಮಾತ್ರ ವಾಡಿಕೆ ಮಳೆಯಾಗಿದೆ. ಈ ಬಾರಿ 84.10 ಲಕ್ಷ ಹೆಕ್ಟೇರ್ ಮುಂಗಾರು ಬಿತ್ತನೆ ಗುರಿ ಹೊಂದಲಾಗಿತ್ತಾದರೂ, ವಾಸ್ತವದಲ್ಲಿ ಕೇವಲ 43.98 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಬಿತ್ತನೆಯಾಗಿದೆ. ಈ ಬಗ್ಗೆ ರೈತಯು ತಮ್ಮ ಅಳಲು ತೋಡಿಕೊಂಡಿದ್ದಾರೆ.

# ದೇಶಾದ್ಯಂತ ಕಾವೇರಿದ 'ರಿಸರ್ವೇಶನ್ ಹಟಾವೋ' ಆಂದೋಲನ




ನವದೆಹಲಿ : ಶಿಕ್ಷಣ ಕ್ಷೇತ್ರದ ಸುಧಾರಣೆಗಾಗಿ ನಡೆದ ಕಾಕ್ರೋಚ್ ಜನತಾ ಪಾರ್ಟಿಯ (CJP) ಸಾಮಾಜಿಕ ಜಾಲತಾಣ ಅಭಿಯಾನದ ಬೆನ್ನಲ್ಲೇ, ಇದೀಗ 'ರಿಸರ್ವೇಶನ್ ಹಟಾ ವೋ ಆಂದೋಲನ' (RHA) ಎಂಬ ಹೊಸ ಇನ್‌ಸ್ಟಾಗ್ರಾಂ ಚಳವಳಿ ದೇಶಾದ್ಯಂತ ಭಾರಿ ಸಂಚಲನ ಸೃಷ್ಟಿಸಿದೆ. ಜಾತಿ ಆಧಾರಿತ ಮೀಸಲಾತಿ ರದ್ದುಗೊಳಿಸಿ ಅರ್ಹತೆ ಆಧಾರಿತ ಆಯ್ಕೆ ವ್ಯವಸ್ಥೆ ಜಾರಿಗೊಳಿಸಬೇಕೆಂದು ಆಗ್ರಹಿಸು ತ್ತಿರುವ ಈ ಅಭಿಯಾನಕ್ಕೆ ಕೆಲವೇ ದಿನಗಳಲ್ಲಿ 50 ಲಕ್ಷಕ್ಕೂ ಅಧಿಕ ಅನುಯಾಯಿಗಳು ಸೇರ್ಪಡೆಯಾಗಿದ್ದಾರೆ. RHA ಇನ್‌ಸ್ಟಾಗ್ರಾಂ ಖಾತೆಯಲ್ಲಿ ಈಗಾಗಲೇ 100ಕ್ಕೂ ಹೆಚ್ಚು ಪೋಸ್ಟ್‌ಗಳು ಪ್ರಕಟಗೊಂಡಿದ್ದು ಕೋಟಿಗಟ್ಟಲೆ ವೀಕ್ಷಣೆ ಪಡೆದಿವೆ.

# ಪರೀಕ್ಷಾ ಅಕ್ರಮ ತಡೆ ಮಸೂದೆ ಅಂಗೀಕಾರ ಖಚಿತ – ಕಿರಣ್ ರಿಜಿಜು



ನವದೆಹಲಿ : ಪ್ರಶ್ನೆಪತ್ರಿಕೆ ಸೋರಿಕೆ ಸೇರಿದಂತೆ ಪರೀಕ್ಷಾ ಅಕ್ರಮಗಳಿಗೆ ಕಟ್ಟುನಿಟ್ಟಿನ ಕಡಿವಾಣ ಹಾಕುವ ಉದ್ದೇಶದಿಂದ ತರಲಾಗಿರುವ 'ಸಾರ್ವಜನಿಕ ಪರೀಕ್ಷೆಗಳ (ಅನ್ಯಾಯ ಮಾರ್ಗಗಳತಡೆ) ತಿದ್ದುಪಡಿ ಮಸೂದೆ–2026'ಅನ್ನು ಸರ್ಕಾರ ಅಂಗೀಕರಿಸಲಿದೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಸ್ಪಷ್ಟಪಡಿಸಿದ್ದಾರೆ. ವಿರೋಧ ಪಕ್ಷಗಳು ಈ ಕುರಿತ ಚರ್ಚೆಯನ್ನು ಬಹಿಷ್ಕರಿಸಿದರೂ ಸಹ ಮಸೂದೆ ಅಂಗೀಕಾರ ದ ಪ್ರಕ್ರಿಯೆ ಮುಂದುವರಿಯಲಿದೆ ಎಂದು ಅವರು ತಿಳಿಸಿದ್ದಾರೆ. ಚರ್ಚಿಸಲು ಸರ್ಕಾರ ಸಂಪೂರ್ಣ ಸಿದ್ಧವಾಗಿದೆ. ಆದರೆ ಪ್ರತಿಪಕ್ಷಗಳು ಭಾಗವಹಿಸದಿದ್ದರೂ ಶಾಸನ ರೂಪಿಸುವ ಪ್ರಕ್ರಿಯೆ ನಿಲ್ಲುವುದಿಲ್ಲ ಎಂದರು.

# ನೀಟ್ ಯಶಸ್ಸಿನ ಬಳಿಕ ಪಂಜಾಬ್‌ನತ್ತ ಕಾಕ್ರೋಜ್ ಜನತಾ ಪಾರ್ಟಿ




ನವದೆಹಲಿ : ಇತ್ತೀಚೆಗೆ ಪಂಜಾಬ್‌ನಲ್ಲಿ ನಡೆದ ಪಶು ವೈದ್ಯಾಧಿಕಾರಿ ಪರೀಕ್ಷೆಯಲ್ಲೂ ಅಕ್ರಮ ನಡೆದಿದೆ ಎಂಬ ಆರೋಪಗಳು ಕೇಳಿಬರುತ್ತಿದ್ದು, ಅಲ್ಲಿಯೂ ಹೋರಾಟ ನಡೆಸಿ ಶಿಕ್ಷಣ ಸಚಿವರ ರಾಜೀನಾಮೆ ಪಡೆಯಬೇಕೆಂದು ಸಾರ್ವಜನಿಕರು ಆಗ್ರಹಿಸುತ್ತಿದ್ದಾರೆ. ಪಂಜಾಬ್‌ನಲ್ಲಿಯೂ ಪ್ರತಿಭಟನೆ ನಡೆಸುವಂತೆ ಒತ್ತಡ ಹೆಚ್ಚಾಗುತ್ತಿದ್ದಂತೆ ಈ ಕುರಿತು ಪ್ರತಿಕ್ರಿಯಿಸಿರುವ ಕಾಕ್ರೋಜ್ ಜನತಾ ಪಾರ್ಟಿಯ ಸ್ಥಾಪಕ ಅಭಿಜಿತ್ ದೀಪ್ಕೆ, "ನಮಗೆ ಸ್ವಲ್ಪ ಸಮಯಾವಕಾಶ ನೀಡಿ, ಪಂಜಾಬ್‌ನಲ್ಲಿಯೂ ಹೋರಾಟ ನಡೆಸಲು ನಾವು ಅಗತ್ಯ ಯೋಜನೆಯನ್ನು ರೂಪಿಸುತ್ತಿದ್ದೇವೆ" ಎಂದು ಅವರು ತಿಳಿಸಿದ್ದಾರೆ.

# ಕರೂರು ದುರಂತ : ಉದ್ಯೋಗ ಆದೇಶ ರದ್ದುಗೊಳಿಸಿದ ಹೈಕೋರ್ಟ್



ಚೆನ್ನೈ : ತಮಿಳುನಾಡಿನ ಕರೂರು ಕಾಲ್ತುಳಿತ ದುರಂತದ ಸಂತ್ರಸ್ತರ ಕುಟುಂಬಗಳಿಗೆ ಸರ್ಕಾರಿ ಕೆಲಸ ನೀಡಲು ನಿರ್ಧರಿಸಿದ್ದ ಮುಖ್ಯಮಂತ್ರಿ ವಿಜಯ್ ನೇತೃತ್ವದ 'ಟಿವಿಕೆ' (TVK) ಸರ್ಕಾರಕ್ಕೆ ಮದ್ರಾಸ್ ಹೈಕೋರ್ಟ್ ಭಾರಿ ಹಿನ್ನಡೆ ಉಂಟು ಮಾಡಿದೆ. ಸಂತ್ರಸ್ತರ ಕುಟುಂಬಸ್ಥರಿಗೆ ನೀಡಲಾಗಿದ್ದ ಸಾರ್ವಜನಿಕ ಉದ್ಯೋಗ ನೇಮಕಾತಿ ಆದೇಶಗಳನ್ನು ಉಚ್ಚ ನ್ಯಾಯಾಲಯವು ರದ್ದುಗೊಳಿಸಿದ್ದು, ಸರ್ಕಾರದ ಈ ನಿರ್ಧಾರವು ಭಾರತೀಯ ಸಂವಿಧಾನದ ವಿಧಿ 14 (ಸಮಾನತೆಯ ಹಕ್ಕು) ಮತ್ತು ವಿಧಿ 16ರ (ಉದ್ಯೋಗದಲ್ಲಿ ಸಮಾನ ಅವಕಾಶ) ನೇರ ಉಲ್ಲಂಘನೆಯಾಗಿದೆ ಎಂದು ಸ್ಪಷ್ಟಪಡಿಸಿದೆ.

# ಸಂಸತ್ತಿಗೆ ಆಗಮಿಸಿದ ಧರ್ಮೇಂದ್ರ ಪ್ರಧಾನ್‌ಗೆ ಭವ್ಯ ಸ್ವಾಗತ



ನವದೆಹಲಿ : ರಾಜೀನಾಮೆ ನೀಡಿದ್ದ ಒಡಿಶಾದ ಸಂಸದ ಧರ್ಮೇಂದ್ರ ಪ್ರಧಾನ್ ಅವರು ಸೋಮವಾರ ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಪಾಲ್ಗೊಳ್ಳಲು ಮೊದಲ ಬಾರಿಗೆ ಲೋಕಸಭೆಗೆ ಆಗಮಿಸಿದರು. ಈ ವೇಳೆ ಸದನದಲ್ಲಿ ಅತ್ಯಂತ ಕುತೂಹಲಕಾರಿ ಹಾಗೂ ವಿಶೇಷ ವಾತಾವರಣ ನಿರ್ಮಾಣವಾಗಿತ್ತು. ಅವರು ಸದನದೊಳಗೆ ಪ್ರವೇಶಿಸುತ್ತಿದ್ದಂತೆಯೇ ಆಡಳಿತಾರೂಢ ಬಿಜೆಪಿ ಹಾಗೂ ಎನ್‌ಡಿಎ ಮೈತ್ರಿಕೂಟದ ಸಂಸದರು ಒಮ್ಮತ್ತದಿಂದ 'ಧರ್ಮೇಂದ್ರ ಪ್ರಧಾನ್ ಜಿಂದಾಬಾದ್' ಎಂದು ಜೈಕಾರ ಕೂಗುವ ಮೂಲಕ ಅವರನ್ನು ಅತ್ಯಂತ ಗೌರವಯುತವಾಗಿ ಸಭೆಗೆ ಬರಮಾಡಿಕೊಂಡರು.

ಕರಾವಳಿ ತರಂಗಿಣಿ

# ಸಿನಿ ತರಂಗಿಣಿ

## ಸಿನಿಲೋಕದ ಧ್ರುವತಾರೆ ಗಾನಕೋಗಿಲೆ ಎಸ್. ಜಾನಕಿ



ಭಾರತೀಯ ಚಲನಚಿತ್ರ ರಂಗದ ಸಂಗೀತ ಇತಿಹಾಸದಲ್ಲಿ 'ಗಾನ ಕೋಗಿಲೆ', 'ಗಾನ ಗಂಧರ್ವಿ' ಎಂದೇ ಪ್ರಖ್ಯಾತರಾದ ಎಸ್. ಜಾನಕಿ (ಶಿಷ್ಟಾ ಜಾನಕಿ) ಅವರು ತಮ್ಮ ವೈವಿಧ್ಯಮಯ ಕಂಠಸಿರಿ ಮತ್ತು ನೈಜ ಭಾವಾಭಿನಯದಿಂದ ಆರು ದಶಕಗಳಿಗೂ ಹೆಚ್ಚು ಕಾಲ ಕೋಟ್ಯಂತರ ಸಂಗೀತ ಪ್ರೇಮಿಗಳ ಹೃದಯಗಳನ್ನು ಆಳಿದ ಶ್ರೇಷ್ಠ ಗಾಯಕಿ. ನಾದಪ್ರಪಂಚಕ್ಕೆ ತಮ್ಮದೇ ಆದ ಶ್ರೇಷ್ಠ ಕೊಡುಗೆ ನೀಡಿದ ಜಾನಕಿಯವರ ಧ್ವನಿ ಭಾರತೀಯ ಚಿತ್ರಸಂಗೀತದ ಸುವರ್ಣ ಯುಗದ ಪ್ರಮುಖ ಸಂಕೇತ. ಎಸ್. ಜಾನಕಿಯವರು ಏಪ್ರಿಲ್ 23, 1938ರಂದು ಆಂಧ್ರ ಪ್ರದೇಶದ ಗುಂಟೂರು ಜಿಲ್ಲೆಯ 'ರೆಪಲ್ಲೆ' ಎಂಬ ಸಣ್ಣ ಗ್ರಾಮದಲ್ಲಿ ಜನಿಸಿದರು. ಇವರ ತಂದೆ ಶಿಷ್ಟಾ ಶ್ರೀರಾಮಮೂರ್ತಿ ಮತ್ತು ತಾಯಿ ಸತ್ಯವತಿ. ಬಾಲ್ಯದಿಂದಲೇ ಜಾನಕಿಯವರಿಗೆ ಸಂಗೀತದಲ್ಲಿ ನೈಸರ್ಗಿಕ ಆಸಕ್ತಿಯಿತ್ತು. ವಿಶೇಷವೆಂದರೆ, ಇವರು ಯಾವುದೇ ಶಾಸ್ತ್ರೀಯ ಸಂಗೀತದ ಕಠಿಣ ಔಪಚಾರಿಕ ತರಬೇತಿಯನ್ನು ಸುದೀರ್ಘವಾಗಿ ಪಡೆಯಲಿಲ್ಲ. ತಮ್ಮ ಚಿಕ್ಕಪ್ಪ ಪೈಡಿ ಸ್ವಾಮಿ ಅವರಿಂದ ಸಂಗೀತದ ಮೂಲ ಪಾಠಗಳನ್ನು ಕಲಿತ ನಂತರ, ಕೇವಲ ಸ್ವಂತ ಪರಿಶ್ರಮ, ಏಕಾಗ್ರತೆ ಹಾಗೂ ನೈಸರ್ಗಿಕ ಪ್ರತಿಭೆಯ ಆಧಾರದ ಮೇಲೆ ಸಂಗೀತ ಲೋಕಕ್ಕೆ ಕಾಲಿಟ್ಟರು. ಅವರ ಅದ್ಭುತ ಧ್ವನಿ ಮತ್ತು ಗಾಯನ ಶೈಲಿಯನ್ನು ಗುರುತಿಸಿದ ನಾಟಕಕಾರ ಪೈಡಿ ಸ್ವಾಮಿ ಅವರು ಜಾನಕಿಯವರನ್ನು ಚೆನ್ನೈನ ಜೆಮಿನಿ ಸ್ಟುಡಿಯೋಸ್‌ಗೆ ತಲುಪಲು ಪ್ರೇರೇಪಿಸಿದರು. 1957ರಲ್ಲಿ ಜೆಮಿನಿ ಸ್ಟುಡಿಯೋಸ್ ಸ್ಪರ್ಧೆಯಾದ ಜಾನಕಿಯವರಿಗೆ ತೆಲುಗಿನ 'ಎಮ್.ಎಲ್.ಎ' ಚಿತ್ರದ ಮೂಲಕ ಹಿನ್ನೆಲೆ ಗಾಯಕಿಯಾಗಿ ಪ್ರಥಮ ಅವಕಾಶ ದೊರೆಯಿತು. 1957ರಲ್ಲೇ ಬಿಡುಗಡೆಯಾದ 'ರಾಯರ ಸೊಸೆ' ಚಿತ್ರದ ಮೂಲಕ ಕನ್ನಡ ಚಿತ್ರರಂಗ ಪ್ರವೇಶಿಸಿದ ಎಸ್. ಜಾನಕಿಯವರು, ತದನಂತರ ಕನ್ನಡಿಗರ ನೆಚ್ಚಿನ ಗಾಯಕಿಯಾಗಿ ಹೊರಹೊಮ್ಮಿದರು. ಕನ್ನಡ ನಾಡು, ನುಡಿ ಮತ್ತು ಕನ್ನಡಿಗರ ಮೇಲೆ ಜಾನಕಮ್ಮನವರಿಗೆ ಅಪಾರ ಪ್ರೀತಿ. ಕನ್ನಡದ ಘಟಾನುಘಟಿ ಗಾಯಕರು ಮತ್ತು ಸಂಗೀತ ನಿರ್ದೇಶಕರೊಂದಿಗೆ ಇವರ ಜೋಡಿ ಅದ್ಭುತ ಹಿಟ್‌ಗಳನ್ನು ನೀಡಿದೆ. ಜಾನಕಿಯವರು ಡಾ. ರಾಜ್ ಜೊತೆ ಗಾಯನದಲ್ಲಿ ಮೂಡಿಸಿದ ಜೋಡಿ ಸಾರ್ವಕಾಲಿಕ ಯಶಸ್ಸು ಕಂಡಿತು. ಪಿಬಿಎಸ್ ಮತ್ತು ಎಸ್‌ಪಿಬಿ ಅವರೊಂದಿಗೆ ಜಾನಕಿಯವರು ಹಾಡಿದ ಯುಗಳ ಗೀತೆಗಳು ಪ್ರತಿಯೊಬ್ಬ ಕನ್ನಡಿಗನ ದಿನಚರಿಯ ಭಾಗವಾದವು. ರಾಜನ್–ನಾಗೇಂದ್ರ ಅವರ ಮಧುರ ಸಂಯೋಜನೆಗಳಿಗೆ ಜಾನಕಿಯವರ ಜೀವ ತುಂಬಿದ ಗಾಯನ ಮೆರುಗು ನೀಡಿದರೆ, ಹಂಸಲೇಖ ಅವರ ಹಸನ್ಮುಖಿ ಸಾಹಿತ್ಯಕ್ಕೆ ಜಾನಕಿಯವರ ನಾದಸ್ಪರ್ಶ ಹೊಸ ಇತಿಹಾಸವನ್ನೇ ಸೃಷ್ಟಿಸಿತು. 'ಯುಗ ಯುಗಗಳೇ ಸಾಗಲಿ', 'ಗಗನವು ಎಲ್ಲೋ ಭೂಮಿಯು ಎಲ್ಲೋ', 'ಇಂದೆನಗಾನಂದವಾಯಿತು', 'ಪೂರ್ಣ ಚಂದ್ರಿಕಾ', 'ನನ್ನಾಸೆಯು ಹೂವೇ', 'ಶೃಂಗಾರಕಾವ್ಯ' ಮುಂತಾದ ಸಾವಿರಾರು ಹಾಡುಗಳು ಇಂದಿಗೂ ಪ್ರತಿಯೊಂದು ಮನೆಯಲ್ಲೂ ಕೇಳಿಬರುತ್ತವೆ. ಎಸ್. ಜಾನಕಿಯವರ ಗಾಯನದ ಅತಿ ದೊಡ್ಡ ಶಕ್ತಿಯೆಂದರೆ ವೈವಿಧ್ಯತೆ. ಯಾವುದೇ ತಾಂತ್ರಿಕ ಸಹಾಯವಿಲ್ಲದೆ ತಮ್ಮ ಕಂಠವನ್ನು ಅತ್ಯಂತ ಸುಲಭವಾಗಿ ಬದಲಾಯಿಸುವ ಕೌಶಲ ಅವರಿಗೆ ಸಿದ್ಧಿಸಿತ್ತು: ಪುಟಾಣಿ ಮಕ್ಕಳ ಪಾತ್ರಕ್ಕೆ ಅವರೇ ಹಾಡುತ್ತಿದ್ದ ರೀತಿಯನ್ನು ಕೇಳಿದರೆ ನಿಜವಾದ ಮಗುವೇ ಹಾಡುತ್ತಿದೆಯೇನೋ ಎಂಬ ಭ್ರಮೆ ಉಂಟಾಗುತ್ತಿತ್ತು. ವಯಸ್ಸಾದ ಮುದುಕಿ, ಗ್ರಾಮೀಣ ಸೊಗಡಿನ ಹೆಣ್ಣುಮಗಳು, ಶೃಂಗಾರ ನಾಯಕಿ ಹೀಗೆ ಪ್ರತಿಯೊಂದು ಪಾತ್ರಕ್ಕೂ ಸೂಕ್ತವಾಗುವಂತೆ ಧ್ವನಿಯ ಭಾವನೆಗಳನ್ನು ಹೊಂದಿಸುತ್ತಿದ್ದರು. ಜಾನಕಿ ಅವರು ಚಲನಚಿತ್ರಗಳು, ಆಲ್ಬಮ್‌ಗಳು, ದೂರದರ್ಶನ ಮತ್ತು ರೇಡಿಯೋಗಳಿಗಾಗಿ 48,000ಕ್ಕೂ ಹೆಚ್ಚು ಹಾಡುಗಳನ್ನು ಹಾಡಿದ್ದಾರೆ. ಇವುಗಳಲ್ಲಿ 20ಕ್ಕೂ ಹೆಚ್ಚು ಭಾರತೀಯ ಭಾಷೆಗಳು ಹಾಗೂ ಕೆಲವು ವಿದೇಶಿ ಭಾಷೆಗಳಲ್ಲಿನ ಏಕಗಾಯನ, ಯುಗಳ ಗೀತೆಗಳು, ಸಮೂಹ ಗಾಯನ ಮತ್ತು ಶೀರ್ಷಿಕೆ ಗೀತೆಗಳು ಸೇರಿವೆ. ಇವುಗಳಲ್ಲಿ ಅತಿ ಹೆಚ್ಚು ಹಾಡುಗಳು ಕನ್ನಡ ಭಾಷೆಯಲ್ಲಿವೆ. ಅವರು ಭಾರತದ ಅತ್ಯಂತ ಬಹುಮುಖಿ ಪ್ರತಿಭೆಯ ಗಾಯಕಿಯರಲ್ಲಿ ಒಬ್ಬರಾಗಿದ್ದರು. ಜಾನಕಿ ತಮ್ಮ 19ನೇ ವಯಸ್ಸಿನಲ್ಲಿ 'ವಿಧಿಯಿನ್ ವಿಲಯಟ್ಟು' (1957) ಎಂಬ ತಮಿಳು ಚಿತ್ರದ ಮೂಲಕ ತಮ್ಮ ಗಾಯನ ವೃತ್ತಿಜೀವನವನ್ನು ಪ್ರಾರಂಭಿಸಿದರು ಮತ್ತು ಅದೇ ವರ್ಷದಲ್ಲಿ ಆರು ವಿಭಿನ್ನ ಭಾಷೆಗಳಲ್ಲಿ ಹಾಡುಗಳನ್ನು ಧ್ವನಿಮುದ್ರಿಸಿದರು. ಅವರ ವೃತ್ತಿಜೀವನವು ಆರು ದಶಕಗಳಿಗೂ ಹೆಚ್ಚು ಕಾಲ (2016ರವರೆಗೆ) ಮುಂದುವರಿಯಿತು; ಆ ವರ್ಷದಲ್ಲಿ ಅವರು ಚಲನಚಿತ್ರ ಗಾಯನ ಮತ್ತು ವೇದಿಕೆ ಪ್ರದರ್ಶನಗಳಿಂದ ನಿವೃತ್ತರಾಗುವುದಾಗಿ ಘೋಷಿಸಿದರು. ಆದಾಗ್ಯೂ, 2018ರಲ್ಲಿ 'ಪನ್ನಾಡಿ' ಎಂಬ ತಮಿಳು ಚಿತ್ರಕ್ಕಾಗಿ ಹಾಡುವ ಮೂಲಕ ಅವರು ಮತ್ತೆ ಹಿಂತಿರುಗಿದರು. ಅವರು ಸುಮಾರು 60 ವರ್ಷಗಳ ಕಾಲ ಸಂಗೀತ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದರು. ಅವರು ನಾಲ್ಕು ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳು ಮತ್ತು 33 ವಿವಿಧ ರಾಜ್ಯ ಚಲನಚಿತ್ರ ಪ್ರಶಸ್ತಿಗಳನ್ನು ಗೆದ್ದಿದ್ದಾರೆ. ಅವರು ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್, ತಮಿಳುನಾಡು ಸರ್ಕಾರದಿಂದ 'ಕಲೈಮಾಮಣಿ' ಪ್ರಶಸ್ತಿ ಮತ್ತು ಕರ್ನಾಟಕ ಸರ್ಕಾರದಿಂದ 'ರಾಜ್ಯೋತ್ಸವ ಪ್ರಶಸ್ತಿ'ಗಳನ್ನು ಪಡೆದಿದ್ದಾರೆ. ತಮ್ಮ ವೃತ್ತಿಜೀವನದ ಸಾಧನೆಗಾಗಿ 2013ರಲ್ಲಿ ಭಾರತದ ಮೂರನೇ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಪದ್ಮ ಭೂಷಣ'ವನ್ನು ಬಹಳ ತಡವಾಗಿ ಬಂದಿದೆ ಎಂದು ನಿರಾಕರಿಸಿದ್ದರು. ಅಲ್ಲದೆ, ರಾಷ್ಟ್ರೀಯ ಪ್ರಶಸ್ತಿಗಳ ಪಟ್ಟಿಯಲ್ಲಿ ದಕ್ಷಿಣ ಭಾರತದ ಕಲಾವಿದರಿಗೆ ಸೂಕ್ತ ಪ್ರಾತಿನಿಧ್ಯ ಮತ್ತು ಮನ್ನಣೆ ಸಿಗದಿರುವ ಬಗ್ಗೆ ಅವರು ಅಸಮಾಧಾನ ವ್ಯಕ್ತಪಡಿಸಿದ್ದರು. ಇವರು 1959ರಲ್ಲಿ ವಿ. ರಾಮ್‌ಪ್ರಸಾದ್ ಅವರನ್ನು ವಿವಾಹವಾದರು. ಅವರು ಜಾನಕಿ ಅವರ ವೃತ್ತಿಜೀವನಕ್ಕೆ ಪ್ರೋತ್ಸಾಹ ನೀಡಿದರೂ 1997ರಲ್ಲಿ ಹೃದಯ ಸ್ತಂಭನದಿಂದ ಅವರು ನಿಧನರಾದರು. ಜಾನಕಿ ಅವರು ವಯೋಸಹಜ ಅನಾರೋಗ್ಯದ ಕಾರಣದಿಂದಾಗಿ 2026ರ ಜುಲೈ 11ರಂದು ಮೈಸೂರಿನಲ್ಲಿ ತಮ್ಮ 88ನೇ ವಯಸ್ಸಿನಲ್ಲಿ ನಿಧನರಾದರು. ಇಂತಹ ಮಹಾನ್ ಗಾಯಕಿ ಎಸ್ ಜಾನಕಿಯವರು ನಮ್ಮ ಕರಾವಳಿ ತರಂಗಿಣಿ ಪತ್ರಿಕೆಯ ಈ ವಾರದ ಸಿನಿಲೋಕದ ಧ್ರುವತಾರೆಯಾಗಿದ್ದಾರೆ.












ಎನ್ನಾರ್ ಕೆ ವಿಶ್ವನಾಥ್
ENNAR K VISHWANATH







KARAVALI THARANGINI Weekly Owned, Editor, Published & Printed by Lalithasri Preetham Rai No.2-64/54(12), Pushparaj Nilaya, Jayanagara, 3rd 'A' Maroli Village, Dakshina Kannada, Karnataka - 575005.
email: karavalitharangini@gmail.com, web: karavalitharangini.com ph: 9880109212 Printed at Bhima Samskruthi Printers & Publishers, No 1182 14th Main Road Prakash Nagar, Bengaluru Karnataka-560021